# ತುಂಗಾ ಮಹಾವಿದ್ಯಾಲಯ, ಆನಂದಗಿರಿ, ತೀರ್ಥಹಳ್ಳಿ-577432, ಶಿವಮೊಗ್ಗ ಜಿಲ್ಲೆ

## ರಾಷ್ಟ್ರೀಯ ಸೇವಾ ಯೋಜನಾ ಘಟಕ 1 ಮತ್ತು 2

## *2018-19ನೇ ಸಾಲಿನ ದೈನಂದಿನ ಚಟುವಟಿಕೆಗಳ ವರದಿ*

**ದಿನಾಂಕ:10.4.2019**

- ದಿನಾಂಕ:05.06.2018 ರಂದು ಪ್ರಥಮ ವರ್ಷದ ಬಿ.ಎ., ಬಿ.ಎಸ್ಸಿ., ಬಿ.ಕಾಂ.ಗೆ ಪ್ರವೇಶ ಪಡೆದು ಎನ್.ಎಸ್.ಎಸ್. ಗೆ ನೊಂದಣಿ ಮಾಡಿಸಿಕೊಂಡ ಸ್ವಯಂ ಸೇವಕರಿಗೆ ಎನ್.ಎಸ್.ಎಸ್ ನ ಕುರಿತು ಮಾಹಿತಿ ನೀಡಲಾಯಿತು.
- ದಿನಾಂಕ:21.06.2018 ರಂದು ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ 4ನೇ ಅಂ.ರಾ.ಯೋಗ ದಿನಾಚರಣೆ ಪ್ರಯುಕ್ತ ತೀರ್ಥಹಳ್ಳಿಯ ಯೋಗ ಸಮಿತಿಯ ಯೋಗ ಗುರು ಶ್ರೀ ಹೆಚ್.ಎಂ.ಕೃಷ್ಣಮೂರ್ತಿಯವರಿಂದ ಯೋಗ ಪ್ರದರ್ಶನ ಮತ್ತು ಮಾಹಿತಿ ಕಾರ್ಯಕ್ರಮ ನಡೆಸಲಾಯಿತು.
- ದಿನಾಂಕ:29.06.2018 ರಿಂದ ದಿನಾಂಕ:05.07.2018 ರವರೆಗೆ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಎನ್.ಎಸ್.ಎಸ್. ಶಿಬಿರಕ್ಕೆ ದ್ವಿತೀಯ ಬಿ.ಕಾಂ. ನ ಕು.ಪೂಜಾ, ಕು.ಶ್ರಾವ್ಯ ಹಾಗೂ ದ್ವಿತೀಯ ಬಿ.ಎ. ಅರ್ಪಿತ್.ಎ.ಎಮ್ ಹಾಗೂ ಪ್ರಶಾಂತ್.ಎಲ್.ಜಿ. ಇವರನ್ನು ಕಳುಹಿಸಿಕೊಡಲಾಯಿತು.
- ದಿನಾಂಕ:04.07.2018 ರಂದು ಪ್ರಥಮ ವರ್ಷದ ಎನ್.ಎಸ್.ಎಸ್. ಸ್ವಯಂಸೇವಕರಿಗೆ ಐ.ಕ್ಯೂ.ಎ.ಸಿ. ಕೋ-ಆರ್ಡಿನೇಟರ್‌ರಿಂದ ಮಾಹಿತಿ ಮತ್ತು ಕಾಲೇಜಿನ ಆವರಣದ ಸ್ವಚ್ಛತೆ ಕೈಗೊಳ್ಳಲಾಯಿತು.
- ದಿನಾಂಕ:10.08.2018 ರಂದು ಕಾಲೇಜಿನ ರಜತ ಸಭಾಂಗಣದಲ್ಲಿ 2018-19ನೇ ಸಾಲಿನ ರಾ.ಸೇ.ಯೋ. ಚಟುವಟಿಕೆಗಳ ಉದ್ಘಾಟನೆಯನ್ನು ಶಿರಾಳಕೊಪ್ಪದ ಕದಂಬ ಪ್ರಥಮ ದರ್ಜೆ ಕಾಲೇಜಿನ ರಾ.ಸೇ.ಯೋ. ಅಧಿಕಾರಿಯಾದ ಡಾ. ಗುರುಪ್ರಸಾದ್.ಟಿ.ಆರ್. ನೆರವೇರಿಸಿದರು.
- ದಿನಾಂಕ:28.08.2018 ರಂದು ಕಾಲೇಜಿನ ಆವರಣದಲ್ಲಿ ಆಹಾರ್ಯ ಕ್ಯಾಂಟೀನ್ ಮತ್ತು ಕಾಲೇಜಿನ ಮುಖ್ಯ ರಸ್ತೆಯ ಎರಡು ಬದಿಯಲ್ಲಿ ಹಳು ಸವರಿ ತೆಗೆಯಲಾಯಿತು.
- ದಿನಾಂಕ:29.08.2018 ರಂದು ಕೊಡಗು ಸಂತ್ರಸ್ತರ ಪರಿಹಾರ ನಿಧಿಗೆ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಿ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗೆ ಪಾವತಿ ಮಾಡಲಾಯಿತು.
- ದಿನಾಂಕ:03.09.2018 ರಿಂದ ದಿನಾಂಕ:06.09.2018 ರವರೆಗೆ ಜಿ.ಕೆ.ವಿ.ಕೆ., ಬೆಂಗಳೂರಿನಲ್ಲಿ ನಡೆದ ಎನ್.ಐ.ಸಿ. ಕ್ಯಾಂಪ್‌ಗೆ ತೃತೀಯ ಬಿ.ಎಸ್ಸಿ. ಸಂಜಯ್.ಬಿ.ಪಿ. ಯವರನ್ನು ಕಳುಹಿಸಿ ಕೊಡಲಾಯಿತು.
- ದಿನಾಂಕ:07.09.2018 ರಂದು ರಾ.ಸೇ.ಯೋ. ಕು.ವಿ.ವಿ. ಘಟಕ, ನಗರ ಕಛೇರಿ, ಶಿವಮೊಗ್ಗಕ್ಕೆ ಕಾವ್ಯಾ, ರೇಷ್ಮ, ಪ್ರಶಾಂತ್.ಎಲ್.ಜಿ., ಸವಿತ.ಡಿ.ಬಿ. ಯವರನ್ನು RD Selection ಗೆ ಕಳುಹಿಸಿ ಕೊಡಲಾಯಿತು.
- ದಿನಾಂಕ:08.09.2019 ರಂದು 'ತೇಜಸ್ವಿ' ಜನ್ಮದಿನದ ಪ್ರಯುಕ್ತ ಪರಿಸರ ಜಾಗೃತಿ ಶಿಬಿರವನ್ನು ಕುಪ್ಪಳಿಯಲ್ಲಿ ಹಮ್ಮಿಕೊಳ್ಳಲಾಯಿತು.
- ದಿನಾಂಕ:24.09.2018 ರಂದು ರಾ.ಸೇ.ಯೋ. 50ನೇ ದಿನಾಚರಣೆ ಪ್ರಯುಕ್ತ ಕಾಲೇಜಿನ ರಜತ ಸಭಾಂಗಣದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಯಿತು. ತೀರ್ಪುಗಾರರಾಗಿ ಶ್ರೀಮತಿ ವಿಭಾಪ್ರಕಾಶ್, ಶ್ರೀಮತಿ ಅರುಂಧತಿ ಆಗಮಿಸಿದ್ದರು.
- ದಿನಾಂಕ:28.09.2018 ರಂದು ಎನ್.ಎಸ್.ಎಸ್. ಸ್ವಯಂ ಸೇವಕರು ಮುನಿಸಿಪಾಲಿಟಿ ಟ್ರ್ಯಾಕ್ಟರ್‌ಗೆ ಕಸ ತುಂಬಿದರು. ದಿನಾಂಕ:27.09.2018 ಮತ್ತು ದಿನಾಂಕ:28.09.2018ರಂದು ಸುವರ್ಣ ಸಂಭ್ರಮಾಚರಣೆಯ ಪ್ರಯುಕ್ತ ಕಾಲೇಜಿನ ಆವರಣದಲ್ಲಿ ಹಳು ತೆಗೆದು, ಪ್ಲಾಸ್ಟಿಕ್ ಆಯ್ದು, ಕಸ ಸಂಗ್ರಹಿಸಿ ಪಟ್ಟಣ ಪಂಚಾಯಿತಿ ಟ್ರ್ಯಾಕ್ಟರ್‌ನಲ್ಲಿ ತುಂಬಿ ಕಳುಹಿಸಲಾಯಿತು.
- ದಿನಾಂಕ:02.10.2018 ಗಾಂಧಿ ಜಯಂತಿಯನ್ನು ಆಚರಿಸಿ ಸುವರ್ಣ ಸಂಭ್ರಮಾಚರಣೆಯಲ್ಲಿ ಉಂಟಾದ ಕಸವನ್ನು ತೆಗೆದು ಸ್ವಚ್ಛಗೊಳಿಸುವ ಕಾರ್ಯವನ್ನು ಮಾಡಲಾಯಿತು.
- ದಿನಾಂಕ:12.10.2018 ರಿಂದ ದಿನಾಂಕ:16.10.2018ರ ವರೆಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ನಡೆದ ರಾಜ್ಯ ರಾಷ್ಟ್ರೀಯ ಸೇವಾ ಯುವಜನೋತ್ಸವಕ್ಕೆ ಕಾವ್ಯಾ.ಎ.ಎಸ್. ಇವರನ್ನು ಕಳುಹಿಸಿಲಾಯಿತು.
- ದಿನಾಂಕ:18.01.2019 ರಂದು ವಿಶ್ವವಿದ್ಯಾಲಯ ಮಟ್ಟದ ಕಾರ್ಯಾಗಾರಕ್ಕೆ ಅಂಜನ್.ಹೆಚ್.ಎಸ್., ಅರ್ಪಿತ್.ಎ.ಎಮ್., ರೇಷ್ಮಾ.ಎ., ಶ್ವೇತಾ.ಕೆ.ಎಸ್. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗಕ್ಕೆ ಕಳುಹಿಸಲಾಯಿತು.

ಪ.ತಿ.ನೋ.

Scanned by CamScanner

ದಿನಾಂಕ:29.01.2019 ಮತ್ತು ದಿನಾಂಕ:30.01.2019 ರಂದು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಮಂಗಳೂರು ವಿಶ್ವವಿದ್ಯಾಲಯ ಸಂಯುಕ್ತ ಆಶ್ರಯದಲ್ಲಿ ಸ.ಪ್ರ.ದ.ಕಾಲೇಜು, ಹಿರಿಯಡ್ಕ, ಇಲ್ಲಿ ಸಂಘಟಿಸಿರುವ ಡಾ.ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆ ಕುರಿತಾದ ರಾಜ್ಯಮಟ್ಟದ ವಿಚಾರ ಸಂಕಿರಣಕ್ಕೆ ಭರತ್‌ರಾಜ್.ಇ.ಜೆ., ಶಾರುಖ್, ಕಾವ್ಯಾ.ಎ.ಸ್., ನಿರೀಕ್ಷ.ಎಲ್.ಎಸ್. ಇವರನ್ನು ಪ್ರೊ.ಎಮ್.ಜಿ.ನಾಗರಾಜ್‌ರವರ ಜೊತೆಗೆ ಕಳುಹಿಸಲಾಯಿತು.

- ದಿನಾಂಕ:25.01.2019 ರಂದು ಕಾಲೇಜಿನ ರಜತ ಸಭಾಂಗಣದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರಯುಕ್ತ ಕು.ಶ್ವೇತಾ.ಕೆ.ಎಸ್., ದ್ವಿಬಿ.ಎ. ಇವರು ಮತದಾರರ ಜಾಗೃತಿ ಕುರಿತು ಮಾತನಾಡಿದರು. ಮತದಾರರ ದಿನದ ಪ್ರತಿಜ್ಞೆಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಭೋದಿಸಲಾಯಿತು.
- ದಿನಾಂಕ:24.02.2019 ರಿಂದ ದಿನಾಂಕ:03.03.2019ರ ವರೆಗೆ ವಿಶ್ವವಿದ್ಯಾಲಯ ಮಟ್ಟದ 'ಸ್ವಚ್ಛತಾ ಶಿಬಿರ' ಸಹ್ಯಾದ್ರಿ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗಕ್ಕೆ ಸವಿತ.ಡಿ.ಬಿ., ಶಾರುಖ್‌ರವರನ್ನು ಕಳುಹಿಸಿಕೊಡಲಾಯಿತು.
- ದಿನಾಂಕ:26.02.2019 ರಂದು 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದ ಹಿನ್ನಲೆಯಲ್ಲಿ ಕಾಲೇಜಿನ ಆವರಣದ ಸ್ವಚ್ಛತೆ ಮಾಡಲಾಯಿತು.
- ದಿನಾಂಕ:28.02.2019 ರಮದು ಪ್ರಥಮ ಬಿ.ಕಾಂ. ಮತ್ತು ಬಿ.ಎ. ವಿದ್ಯಾರ್ಥಿಗಳಿಂದ ಹಳು ಕಡಿಯಲಾಯಿತು
- ದಿನಾಂಕ:02.03.2019 ರಂದು ನಿಮಾನ್ಸ್ ಮತ್ತು ಮೆಗ್ಗಾನ್ ಆಸ್ಪತ್ರೆ ಸಹಯೋಗದಲ್ಲಿ "ಅಡಿಕ್ಷನ್ ದುಷ್ಪರಿಣಾಮಗಳು" ಕುರಿತು ಶ್ರೀ ಹೇಮಂತ್‌ರಾಜ್ ಅರಸ್, ಶ್ರೀ ಶಿವಕುಮಾರ್, ಶ್ರೀ ಸುರೇಶ್.ಕೆ.ಕೆ. ರವರು ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು
- ದಿನಾಂಕ:20.03.2019 ರಂದು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಘಟಕದಿಂದ ಕಾಲೇಜಿನಲ್ಲಿ ವಾರ್ಷಿಕ ಶಿಬಿರ ನಡೆಸಲು ಅನುಮತಿ ನೀಡಿದ ಕಾರಣ ಪ್ರೊ.ಎಲ್.ಕೆ.ನಟರಾಜ್‌ರವರೊಂದಿಗೆ ಸಮೀಪದ ಭಾರತೀಪುರದ ಶಾಲೆಗೆ ಭೇಟಿ ನೀಡಿ ಮುಖ್ಯ ಶಿಕ್ಷಕಿ ಪುಷ್ಪಾವತಿ.ಎಂ.ಆರ್. ಹಾಗೂ ಗ್ರಾಮಸ್ಥರರೊಮದಿಗೆ ಮಾತುಕತೆ ನಡೆಸಲಾಯಿತು.
- ದಿನಾಂಕ:22.03.2019 ರಂದು ಕಾಲೇಜಿನ ಮುಂಭಾಗದ ತ್ರಿಕೋನಾಕಾರದ ಜಾಗದಲ್ಲಿ ಹಾಗೂ ಕ್ಯಾಂಟೀನ್ ಪಕ್ಕದಲ್ಲಿ ಸ್ವಚ್ಛತಾ ಕಾರ್ಯ ಮಾಡಲಾಯಿತು.
- ದಿನಾಂಕ:23.03.2019 ರಂದು ಶಿಬಿರ ಆಯೋಜಿಸುವ ಕುರಿತಂತೆ ಬಿ.ಕಾಂ., ಬಿ.ಎ., ಬಿ.ಎಸ್ಸಿ. ವಿದ್ಯಾರ್ಥಿ ಪ್ರತಿನಿಧಿಗಳು ಕ್ಲಬ್‌ಗಳ ಕಾರ್ರ‍್ಯಕ್ರಮಗಳ ಕುರಿತಂತೆ ಸಮಾಲೋಚನೆ ಮಾಡಲಾಯಿತು.
- ದಿನಾಂಕ:08.04.2019 ಕಾಲೇಜಿನಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರ ಪೂರ್ವಬಾವಿ ಸಭೆ ಕರೆದು ಶಿಬಿರದ ಮುಂಚೆ ನೀಡಲಾಗುವ ಸೂಚನೆ ಹಾಗೂ ಮಾರ್ಗದರ್ಶನ ಮಾಡಲಾಯಿತು.

ಕಾರ್ಯಕ್ರಮಾಧಿಕಾರಿಗಳು

Scanned by CamScanner